# ಮಾತು-ಕತೆ

◆ ನಿಮ್ಮ ಹಿನ್ನೆಲೆ, ಬೆಳೆದು ಬಂದ ಪರಿಸರ, ಕುಟುಂಬ ಹಾಗೂ ವಿದ್ಯಾಭ್ಯಾಸ, ಉದ್ಯೋಗದ ಬಗ್ಗೆ ಹೇಳಿ.

ನನ್ನದು ಅನಕ್ಷರಸ್ಥರ ಕುಟುಂಬ, ಅಪ್ಪ ಕಲ್ಲು ಕಟೆದು, ಗೋಡೆ ಕಟ್ಟುವವ. ಅವ್ವ ಅವನ ಕೈಯಲ್ಲಿ ಕೆಸರು ಕಲ್ಲು ಕೊಡುವ ಹೆಣ್ಣಾಳು. ಅವಳ ಕೈಗೆ ಬಳೆ ಇರಲಿಲ್ಲ. ಎದೆಗೆ ಕುಪ್ಪಸ ಇರಲಿಲ್ಲ. ರಣಗುಟ್ಟುವ ಬಿಸಿಲಿಗೆ ಎದೆಯೊಡ್ಡಿ, ಸುರಿಯುವ ಮಳೆಯಲ್ಲಿ ನೆಂದು, ಕೊರೆಯುವ ಚಳಿಯನ್ನೂ ಲೆಕ್ಕಿಸದೆ ಹೊಟ್ಟೆ ಬಟ್ಟೆಗಾಗಿ ಅವರದು ನಿತ್ಯ ಹೋರಾಟ. ಅವರ ದುಡಿತದಲ್ಲಿಯೇ ಏಳು ಜನರ ತುತ್ತಿನ ಚೀಲ ತುಂಬಿಸಬೇಕು. ಇದ್ದರೆ ತಿನ್ನುವುದು, ಇರದಿದ್ದರೆ ತಣ್ಣೀರು ಕುಡಿಯುವುದು. ಉಪ್ಪು ಮೆಣಸಿನಕಾಯಿ ಇದ್ದರೆ ಹಿಟ್ಟಿಲ್ಲ. ಹಿಟ್ಟಿದ್ದರೆ ಉಪ್ಪು ಮೆಣಸಿನಕಾಯಿ ಇಲ್ಲ. ನನ್ನಪ್ಪ ಒಂದು ದಿನ ತಂಗಳು ರೊಟ್ಟಿಯೊಂದಿಗೆ ಉಪ್ಪು ಹಸಿಮೆಣಸಿನಕಾಯಿ ಕಡಿದುಕೊಂಡು ತಿಂದಿದ್ದು ಈಗಲೂ ನನ್ನನ್ನು ಕಾಡಿ ತಳಮಳಗೊಳ್ಳುವಂತೆ ಮಾಡುತ್ತಲೇ ಇದೆ. ಅವ್ವ ಗಿರಣಿಯೊಳಗೆ ಉಳಿದ, ಬಳಿದು ತಂದ ಹಿಟ್ಟು ನಮ್ಮ ಕರುಳು ಮುಸರಿ (ಅರೆ ಹೊಟ್ಟೆ) ಮಾಡಿದ್ದಿದೆ. ಉಪವಾಸದಲ್ಲೂ ಅವರದು ಹಂಗಿಲ್ಲದ ಬದುಕು. ತಾವು ಕಲಿಯದಿದ್ದರೂ ನನಗೆ ನಾಲ್ಕಕ್ಷರ ಕಲಿಸಿದ ಹೆಗ್ಗಳಿಕೆ ಅವರದು. ಅಪ್ಪ ತನ್ನ ಹೆಗಲ ಮೇಲೆ ಕೂಡ್ರಿಸಿಕೊಂಡು ಶಾಲೆಗೆ ಸೇರಿಸಿದ ನೆನಪು. ಆಗ ನನಗೆ ಚಡ್ಡಿ ಇರಲಿಲ್ಲ. ಅಂಗಿಯೊಂದೇ. ಕೈಯಲ್ಲೊಂದು ಪಾಟಿ. ಚೋಟುದ್ದವಿದ್ದ ನನಗೆ ಶಾಲೆ ಕೋಣೆಯ ಎತ್ತರ ನೋಡಿ ಆಗ ಗಾಬರಿಯಾಗಿತ್ತು.

ಶಾಲೆಗೆ ನಮ್ಮ ಮನೆ ತುಂಬಾ ಹತ್ತಿರವಿತ್ತು. ಮನೆ ಶಾಲೆಯ ನಡುವೆ ಸದಾ ಹರಿಯುವ ಹಳ್ಳ. (ಮಳೆಯಿಂದ ತುಂಬಿ ಹರಿಯುವ ಹಳ್ಳದಲ್ಲಿ ಆಗ ಎಮ್ಮೆಗಳು ಹರಿದುಕೊಂಡು ಹೋಗಿದ್ದುಂಟು. ಈಗ ಆ ಹಳ್ಳ ಅತಿಕ್ರಮಣಕಾರರಿಂದ ಮುಚ್ಚಿಹೋಗಿದೆ) ಸುತ್ತಲೂ ಹುಣಸೆ, ಬೇವು, ಮಾವು, ತೆಂಗಿನ ಮರಗಳು ಹಳ್ಳದ ತುಂಬ. ದಂಡೆಗೆ ಜೇಕು, ಸಿಂಧಿಗಿಡ, ನೀಲಿ ಕಂಟಿ, ಅಂಟುವಾಳಕಾಯಿ ಗಿಡ, ಕ್ಯಾದಗಿಯ ಸೊಂಪು.

ನಮ್ಮ ಮನೆಯ ಎದುರು ಚಪ್ಪಲಿ ಹೊಲೆಯುವವರ ಮನೆ, ಕುರಿಗಳ ಹಿಂಡು, ಕುಡುಕರ ದಂಡು; ಸುತ್ತುಮುತ್ತ ಬಡವರ, ಅಸಹಾಯಕ ಧ್ವನಿಗಳು. ಮನೆಯ ಎದುರಿಗೆ ದುರ್ಗವ್ವನ ಗುಡಿಯಿತ್ತು. ನಿತ್ಯ ಆ ದೇವರಿಗೆ ಪೂಜೆ ಆಗುತ್ತಿತ್ತು. ಚಳ್ಳಂನ ನಾದ, ನಗಾರಿಯ ಸದ್ದು ಕೇಳುತ್ತಿತ್ತು. ಪೂಜಾರಿಯ ಮೈಮೇಲೆ ಬರುವ ದೇವರು, ದೆವ್ವ ಹಿಡಿದವರ ಒದ್ದಾಟ, ಚೀರಾಟ ನೋಡುತ್ತಿದ್ದೆವು; ಜಾತ್ರೆಗಳಲ್ಲಿ ಕೋಣಗಳನ್ನು ಬಲಿ ಕೊಡಲಾಗುತ್ತಿತ್ತು. ದೇವಿಯ ಮುಂದೆ ಕೋಣನ ತಲೆ, ಅದರ ಬಾಯಲ್ಲಿ ಕಾಲಿನ ತುಂಡು ಇರುತ್ತಿತ್ತು. ಇವನ್ನೆಲ್ಲ ನೋಡುವ ನನ್ನ ಕಣ್ಣುಗಳಲ್ಲಿ ತವಕ, ತಲ್ಲಣ. ಹಾಗಿದ್ದೂ ನೋಡಿಯೇ ಸವಿಯಬೇಕು ಆ ಜಾತ್ರೆಗಳ ರುಚಿ. ಇಂತಹ ಜಾತ್ರೆಯಲ್ಲಿ ಸಣ್ಣ ಪೆಟ್ಟಿಗೆಯಲ್ಲಿ ನಾನು ಪಾನ್‌ಪಟ್ಟಿ ಅಂಗಡಿ ಇಟ್ಟು, ಅತೀ ಸಣ್ಣ ವ್ಯಾಪಾರಿಯಾಗಿದ್ದೆ.

ಬಿಡುವಿದ್ದಾಗ ಅಪ್ಪ ಸಾಯಂಕಾಲ ಹಳ್ಳಕ್ಕೆ ಮೀನು ಹಿಡಿಯಲು ಹೋಗುತ್ತಿದ್ದ. ಜೊತೆಗೆ ನಾನೂ ಹೋಗುತ್ತಿದ್ದೆ. ತೆಳುವಾಗಿ ಹರಿಯುತ್ತಿದ್ದ ಹಳ್ಳಕ್ಕೆ ಇಬ್ಬರೂ ಕೂಡಿ ಒಡ್ಡು ಕಟ್ಟಿ ಒಂದು ಕಡೆಯ ನೀರನ್ನು ಹೊರಕ್ಕೆ ಹಾಕಿ ಅಲ್ಲಿದ್ದ ಮೀನುಗಳನ್ನು ಹಿಡಿಯುತ್ತಿದ್ದೆವು. ಅಪ್ಪ ನನಗೆ ಬರೀ ಮೀನು ತಿನ್ನುವುದನ್ನು ಕಲಿಸಲಿಲ್ಲ. ಮೀನು ಹಿಡಿಯುವುದನ್ನೂ ಕಲಿಸಿದ. ಶಾಲೆಗೆ ಬಿಡುವಿದ್ದಾಗ ಅಪ್ಪನೊಂದಿಗೆ ಕೆಲಸಕ್ಕೆ ಹೋಗುತ್ತಿದ್ದೆ. ಕಲ್ಲು ಹೊತ್ತೆ, ಮಣ್ಣು ತೆಗೆದೆ. ಮೊಂಡಾದ ಉಳಿಗಳನ್ನು ಅಪ್ಪ ಚೂಪುಮಾಡುವಾಗ ಕುಲುಮೆಯಲ್ಲಿ ಕೈ ಸೋತು ಸುಣ್ಣವಾದರೂ ತಿದಿ ಒತ್ತಿದೆ. ನಿಗಿ ನಿಗಿ ಕೆಂಡದ ಮುಂದೆ ಆಗ ಅಪ್ಪ ಕಂಬಾರನಾಗುತ್ತಿದ್ದ. ಅಪ್ಪನದು ಶರಣ ಕುಲವೆಂದೇ ಹೇಳಬೇಕು. ಪಂಡರಾಪುರ, ತಿಂಥಣಿ ಮೌನೇಶ್ವರನ ಭಕ್ತ ಆತ. ಹೀಗಾಗಿ ಇದ್ದಷ್ಟು ದಿನ ಯಾರಿಗೂ ಯಾವುದಕ್ಕೂ ನೋವು ಕೊಡಲಿಲ್ಲ.